<u>ದಿನಾಂಕಃ **09-03-2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಖ್ಯವಿಚಾರಣೆಃ ವಾದಿ ಪರ ಶ್ರೀ ಬಿವಿಕೆ ವಕೀಲರಿಂದಃ</u>

ನಾನು ಈ ದಾವೆಯಲ್ಲಿ ವಾದಿ ಇದ್ದು, ನನ್ನ ಸಾಕ್ಷ್ಯದ ಮುಖ್ಯವಿಚಾರಣೆಯಾಗಿ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ . ಪ್ರಮಾಣಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ.

ದಿನಾಂಕಃ29-04-2019 ರ ಕ್ರಯ ಕರಾರು ಒಪ್ಪಂದ ಪತ್ರವನ್ನು ನಿಪಿ1 ಎಂದು, ಅದರಲ್ಲಿ ವಾದಿಯವರ ಎಲ್ಲಾ ಪುಟಗಳಲ್ಲಿನ ಸಹಿಗಳನ್ನು ನಿಪಿ 1(ಎ) ನಿಂದ 1(ಎಫ್) ಎಂದು, ಪ್ರತಿವಾದಿಯ ಸಹಿಗಳನ್ನು ನಿಪಿ1(ಜಿ) ನಿಂದ 1(ಎಲ್) ಎಂದು, ಇಬ್ಬರು ಸಾಕ್ಷಿದಾರರ ಸಹಿಗಳನ್ನು ನಿಪಿ1(ಎಂ) ಮತ್ತು ನಿಪಿ1(ಎನ್) ಎಂದು, ದಿನಾಂಕಃ02-05-2019 ರ ಕ್ರಯದ ಕರಾರಿನ ಪೂರಕ ಪತ್ರವನ್ನು ನಿಪಿ2 ಎಂದು, ಅದರಲ್ಲಿ ವಾದಿಯ 3 ಸಹಿಗಳನ್ನು ನಿಪಿ 2(ಎ) ನಿಂದ ನಿಪಿ 2(ಸಿ) ಎಂದು, ಪ್ರತಿವಾದಿಯ 3 ಸಹಿಗಳನ್ನು ನಿಪಿ 2(ಡಿ) ರಿಂದ ನಿಪಿ 2(ಎಫ್) ಎಂದು, ಇಬ್ಬರು ಸಾಕ್ಷಿದಾರರ ಸಹಿಗಳನ್ನು ನಿಪಿ 2(ಜಿ) ಮತ್ತು ನಿಪಿ2(ಹೆಚ್) ಎಂದು, ಸ.ನಂ. 186 ಮತ್ತು ಸ.ನಂ. 188/1 ರ ಎರಡು ಪಹಣಿಗಳನ್ನು ಕ್ರಮವಾಗಿ ನಿಪಿ 3 ಮತ್ತು ನಿಪಿ 4 ಎಂದು, ಮ್ಯುಟೇಶನ್ ರಿಜಿಸ್ಟರಿನ ಪ್ರತಿಯನ್ನು ನಿಪಿ 5 ಎಂದು, 25-10-2019 ರಂದು ವಾದಿ ಪ್ರತಿವಾದಿಗೆ ನೀಡಿದ ನೋಟೀಸಿನ ಪ್ರತಿಯನ್ನು ನಿಪಿ 6 ಎಂದು, ಅಂಚೆ ಲಕೋಟೆಯನ್ನು ನಿಪಿ 7 ಎಂದು, ದಿನಾಂಕಃ07-03-2020 ರ ವಕೀಲರ ನೋಟೀಸಿನ ಕಚೇರಿ ಪ್ರತಿಯನ್ನು ನಿಪಿ 8 ಎಂದು, ಅಂಚೆ ಲಕೋಟೆಯನ್ನು ನಿಪಿ 9 ಎಂದು, ಅಕೌಂಟ್ ಸ್ಟೇಟ್ಮೆಂಟನ್ನು ನಿಪಿ 10 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು ನೀಡಲಾಗಿದೆ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ